ಸವಿ ಸವಿ ನೆನಪು..

# ಬೆನ್ನಿಗೆ ಕಣ್ಣಿಲ್ಲದಿದ್ದರೆ ಏನಂತೆ..?

**ಸುಮಾರು ಹತ್ತು ವರ್ಷಗಳ ಹಿಂದೆ ಮನೆಮಂದಿಯೊಂದಿಗೆ ತೆಗೆದ ಈ ಅಪರೂಪದ ಫೋಟೊ ಸವಿನೆನಪುಗಳ ಸಾಲಿಗೆ ಸೇರಿದ್ದು ನೋಡಿದಾಗಲೆಲ್ಲ ಪುಳಕ ತರುತ್ತದೆ.**

**■ ಶ್ರೀರಂಜಿನಿ ಬೆಂಗಳೂರು**



ಕೆಲವೊಮ್ಮೆ ಹಲವು ವರ್ಷಗಳ ಹಿಂದೆ ತೆಗೆದ ಫೋಟೊ ಕೂಡ ಸವಿನೆನಪಾಗಿಯೇ ಉಳಿಯುತ್ತದೆ. ಅದನ್ನೆ ಮತ್ತೆ ಮತ್ತೆ ನೋಡುವುದರಿಂದ ನೆನಪಿನ ಸರಮಾಲೆ ಕಣ್ಣಮುಂದೆ ಹಾದು ಹೋಗುತ್ತದೆ.

ನನ್ನಣ್ಣನ ಮದುವೆಯಲ್ಲಿ ತೆಗೆದ ಈ ಫೋಟೊ ಕೂಡ ಹಳೆಯ ನೆನಪುಗಳಿಗೆ ಹೊಸತಾದ ಬೆಚ್ಚನೆಯ ಭಾವ, ಸ್ಪರ್ಶ ನೀಡುತ್ತದೆ. ಈ ಫೋಟೊ ಕಳೆದೇಹೋಯಿತೆಂದುಕೊಂಡಿದ್ದಾಗ ಮೊನ್ನೆ ಮೊನ್ನೆ ಬೀರುವಿನಲ್ಲಿ ಬಟ್ಟೆಗಳನ್ನು ತೆಗೆಯುತ್ತಿದ್ದಾಗ ಸಿಕ್ಕಿ, ನೆನಪಿನ ಸುರುಳಿ ಬಿಚ್ಚಿಕೊಂಡಿತು.

ಅಪ್ಪ ಮದುವೆಗೆಂದು ಕೊಟ್ಟ ಸೀರೆ ಉಟ್ಟು ಕಲಶ ಕನ್ನಡಿ ಹಿಡಿದು ಮದುವೆ ಮನೆಯಲ್ಲಿ ಓಡಾಡಿದ್ದು ಎಲ್ಲವೂ ಕಣ್ಣೆದುರು ಬಂದು ನಿಂತಿತು. ಏಕೆಂದರೆ ಮದುಮಗನ ಜೊತೆ ಕಲಶದ ಜೊತೆ ಕನ್ನಡಿ ಇರುವ ಹರಿವಾಣ ತಟ್ಟೆ ಹಿಡಿದು ಬರುವ ಅವನ ಸಹೋದರಿಗೆ ವಿಶೇಷ ಮರ್ಯಾದೆ ಶಿವಳ್ಳಿ ಸ್ಮಾರ್ತ ಬ್ರಾಹ್ಮಣರಲ್ಲಿ ಇದೆ. ಮನೆ ಮಗಳಿಗೆ ಅದೊಂದು ಸಡಗರದ ಜೊತೆ ಸಂಭ್ರಮದ ಹಕ್ಕು. ಮದುಮಕ್ಕಳನ್ನು ಕುತೂಹಲದಿಂದ ನೋಡುವಂತೆ ಇವಳನ್ನೂ ಬಂದವರು ಗಮನಿಸುತ್ತಾರೆ. ಬರುವ ನವೆಂಬರ್‌ಗೆ ಈ ಫೋಟೋಕ್ಕೆ ದಶಕದ ಸಂಭ್ರಮ. ಈ ಕಾರಣಗಳಿಗಾಗಿ ಇದು ನನ್ನ ಬದುಕಿನಲ್ಲಿ ಪ್ರಮುಖ ಸ್ಥಾನ ಪಡೆದಿದೆ.

ಮೊದಲನೆಯದ್ದು ಮದುವೆ ಅಂದರೆ ಸಡಗರ, ಸಂಭ್ರಮ. ಕುಟುಂಬದ ಎಲ್ಲ ನೆಂಟರಿಷ್ಟರು ಸಮಾರಂಭಕ್ಕೆ ಸೇರಬೇಕೆಂದು ಮನೆಯವರು ಬಯಸುವುದು ಸಹಜ. ಆದರೆ ಬರುವವರಿಗೋ ಶಾಲೆ, ಆಫೀಸು, ಪರೀಕ್ಷೆ ಎಂಬ ನೂರಾರು ಸಬೂಬುಗಳು ಗೈರುಹಾಜರಾಗಲು.(ಸುಳ್ಳೇ ಆಗಿರಬೇಕೆಂತೇನೂ ಇಲ್ಲ ಈ ನೆಪಗಳು) ಆದರೆ ಈ ಮದುವೆಯಲ್ಲಿ ಯಾರೊಬ್ಬರೂ ನೆವ ಹೇಳದೆ ದೂರದ ಅಮೇರಿಕದಿಂದ ನನ್ನ ಸೋದರ ಮಾವಂದಿರು ಅತ್ತೆಯಂದಿರು, ಅವರ ಮಕ್ಕಳು, ಅಪ್ಪನ ಸಾಹಿತಿ ಮಿತ್ರರಾದ ಕು.ಗೋ, ಶಾಂತರಾಮ ಸೋಮಯಾಜಿ, ನೀಲಾವರ ಸುರೇಂದ್ರ ಅಡಿಗ, ಮಕ್ಕಳ ಮೇಳದ ಶ್ರೀಧರಹಂದೆ, ಮಣಿಪಾಲ ಹೈಯರ್ ಎಜುಕೇಶನ್ನಿನ ಎಚ್.ಶಾಂತರಾಮ್ ಮುಂತಾದವರು, ಅಣ್ಣನ ಸಹೋದ್ಯೋಗಿಗಳು, ನನ್ನ ಶಾಲಾ ಕಾಲೇಜಿನ ಗೆಳತಿಯರು ಒಟ್ಟಿನಲ್ಲಿ ನಮಗೆ ಆಪ್ತರೆನಿಸಿಕೊಂಡವರೆಲ್ಲರೂ ಬಂದಿದ್ದರು. ಮದುವೆಯ ಆಲ್ಬಂನಲ್ಲಿ ಇವರೊಂದಿಗೆ ತೆಗೆದ ಫೋಟೋಗಳನ್ನು ಕಂಡಾಗ ಏನೋ ಒಂಥರಾ ಖುಷಿಯ ಕ್ಷಣಗಳು ಈಗಲೂ ನನ್ನದಾಗುತ್ತವೆ.

ಈ ಫೋಟೋಗಳೆಲ್ಲಾ ಒಂದೊಂದು ನೆನಪಿನ ಕತೆ ಬಿಚ್ಚಿಟ್ಟರೂ ಪ್ರಸ್ತುತ ಫೋಟೊ ಆಪ್ತವಾಗುವ ಕಾರಣ ಇನ್ನೂ ವಿಶೇಷವಾದದ್ದು ಈ ಮದುವೆಗೆ ಸೋಮಯಾಜಿ ಮನೆತನದ ಬರೋಬ್ಬರಿ 10 ಹೆಮ್ಮೊಮ್ಮಕ್ಕಳು(ನನ್ನ ದೊಡ್ಡಪ್ಪಂದಿರ ಹೆಣ್ಣುಮಕ್ಕಳು) ಬಂದಿದ್ದರು. ಇವರು ಯಾರೂ ಈ ಮುಂಚೆ ಒಟ್ಟಿಗೆ ಮನೆಯ ಯಾವುದೇ ಸಮಾರಂಭದಲ್ಲಿ ಸೇರಿದ್ದು ನಾನು ಕಂಡಿರಲಿಲ್ಲ. ಮೇಲಾಗಿ ಅವರಿಗೆಲ್ಲಾ ಕೊನೆ ಚಿಕ್ಕಪ್ಪನ ಕೊನೆಮಗನ ಮದುವೆ ಎಂಬ ಮುದ್ರೆ ಬೇರೆ ಇತ್ತು! ಅಕ್ಕತಂಗಿಯರಿಗಿಂತ ಮಿಗಿಲಾದ ಬಾಂಧವ್ಯವಿರುವ ನಾವು ಈ ನೆನಪು ಶಾಶ್ವತವಾಗಿರಲಿ ಎಂದು ಹಿರಿತನದ ಆಧಾರದ ಮೇಲೆ ಬಲತುದಿಯಿಂದ (ಇವಳೊಬ್ಬಳು ಮಾತ್ರ ನನ್ನ ಸೋದರತ್ತೆಯ ಮಗಳು) ಎಡತುದಿ(ಯಲ್ಲಿ ನಾನು)ನಿಂತುಕೊಂಡು ಫೋಟೊ ತೆಗೆಸಿಕೊಂಡು ಸಂಭ್ರಮಿಸಿದೆವು.

ನಮ್ಮ ಈ ಖುಷಿಯನ್ನೆಲ್ಲಾ ಕೆಳಗೆ ನಿಂತು ನೋಡುತ್ತಿದ್ದ ಕೀಟಲೆ ಸ್ವಭಾವದ ನನ್ನಣ್ಣ ರಾಜಣ್ಣ 'ಪ್ರತೀಬಾರಿ ನಿಮ್ಮ ಮುಖದ ಫೋಟೊ ಮಾತ್ರ ತೆಗೆಸಿಕೊಳ್ಳುತ್ತೀರಿ? ಸ್ವಲ್ಪ ಡಿಫರೆಂಟಾಗಿ ನಿಮ್ಮ ಬೆನ್ನಿನ ಫೋಟೊ ಕೂಡ ತೆಗೆಸಿಕೊಳ್ಳಿ. ನಿಮ್ಮ ಬೆನ್ನನ್ನು ಕನ್ನಡಿಯಲ್ಲಿ ನೋಡಿಕೊಳ್ಳುವ ಕಷ್ಟ ಬೇಡ' ಎಂದು ಬೆನ್ನುಹಾಕಿ ನಿಲ್ಲಲು ಹೇಳಿ ಫೋಟೊ ತೆಗೆದಿದ್ದ. 'ಬೆನ್ನಿಗೆ ಕಣ್ಣಿಲ್ಲದಿದ್ದರೆ ಏನಂತೆ...? ಇಲ್ಲಿಯೂ ಸಲ್ಲಿ, ಅಲ್ಲಿಯೂ ಸಲ್ಲುವವರು' ಎಂಬ ಕ್ಯಾಪ್ಷನ್ ಹಾಕಿ ಬೆನ್ನಿನ ಹಿಂದೆ ನಡೆಯುವುದರ ಬಗ್ಗೆ ಎಚ್ಚರದಲ್ಲಿರುವ ಜೀವನ ಪಾಠವನ್ನೂ ಸೂಕ್ಷ್ಮವಾಗಿ ಹೇಳಿ ಎಲ್ಲರಿಗೂ ಉಡುಗೊರೆಯಾಗಿ ಕೊಟ್ಟಿದ್ದ. ಇದು ಎರಡನೆಯದ್ದು.

ಮೂರನೆಯದ್ದರಲ್ಲಿ ನನ್ನ ಸ್ವಾರ್ಥವೂ ಅದಕ್ಕೆ ಭಾವನಾತ್ಮಕ ಲೇಪನವೂ ಇದೆ. ಏಕೆಂದರೆ ಇಂಥ ಫೋಟೋವನ್ನು ಇನ್ಯಾವತ್ತೂ ಇನ್ನೊಮ್ಮೆ ತೆಗೆಯಲು ಸಾಧ್ಯವಿಲ್ಲ ಎಂಬುದೇ ಬೇಸರದ ವಿಷಯ. ಯಾರೋ ಕರೆದರೆಂದು ಅವಸರವಸರವಾಗಿ ಬಲದಿಂದ 6ನೆಯವಳು ನಮ್ಮನ್ನೆಲ್ಲಾ ಬಿಟ್ಟುಹೋಗಿ ಮೊನ್ನೆ ಮಾರ್ಚ್‌ಗೆ ವರುಷ ಎರಡಾಯಿತು. ಸಿಕ್ಕಿದಾಗಲೆಲ್ಲಾ ಆತ್ಮೀಯತೆಯಿಂದ ಮಾತನಾಡಿಸಿ ಪ್ರೀತಿಯ ಹೊಳೆ ಹರಿಸುತ್ತಿದ್ದ ಶೈಲಜಕ್ಕನ ಅನುಪಸ್ಥಿತಿ ಯಾವುದಾದರೂ ಸಮಾರಂಭದಲ್ಲಿ ನಾವೆಲ್ಲರೂ ಸೇರಿದಾಗ ಎದ್ದು ಕಾಣು(ಡು)ತ್ತದೆ. ಸಾಲಾಗಿ ಶಿಸ್ತಿನಲ್ಲಿ ಫೋಟೊಕ್ಕೆ ಪೋಸು ಕೊಡಲು ನಿಂತಾಗ ಅವಳ ಜಾಗವೊಂದು ಖಾಲಿ...ನಮ್ಮ ಮನಸ್ಸುಗಳೂ ಕೂಡ ಜೀವನದಲ್ಲಿ ಒಂದಲ್ಲ ಒಂದು ನೆನಪು, ಘಟನೆ ಸವಿನೆನಪಾಗಿ ಕಾಡುತ್ತದೆ. ನನಗೆ ಈ ಫೋಟೊ ನೋಡಿದರೆ ಸವಿನೆನಪಿನ ಸರಮಾಲೆಗಳೇ ಕಣ್ಣ ಮುಂದೆ ಹಾದುಹೋಗುತ್ತದೆ. ■